ಓ ಎಸ್‌ಃ 317/2018

ಪಿ ಡಬ್ಲ್ಯೂ ಃ 1

ದಿನಾಂಕಃ 29.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ಶ್ರೀ ಎ ಎನ್ ಕೆ ವಕೀಲರಿಂದಃ**

ನಾನು 2ನೆ ಪಿ ಯು ಸಿ ವರೆವಿಗೂ ವ್ಯಾಸಂಗ ಮಾಡಿರುತ್ತೇನೆ. ನನಗೆ ಆಂಗ್ಲ ಭಾಷೆ ಓದಲು ಬರೆಯಲು ಬರುತ್ತದೆ. ನಾನು ಪ್ರತಿವಾದಿಗಳು ಈ ದಾವೆಯಲ್ಲಿ ಹಾಕಿರುವ ಪ್ರತಿವಾದಪತ್ರವನ್ನು ಓದಿ ಸ್ವಲ್ಪ ತಿಳಿದುಕೊಂಡಿದ್ದೇನೆ. ನಮ್ಮ ತಂದೆ ಸಿ ಮಾದಯ್ಯ ನವರು ಬದುಕಿದ್ದಾಗ ಲೋಕಾಯುಕ್ತದಲ್ಲಿ ಪೊಲೀಸ್ ಪೇದೆಯಾಗಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಸೇವೆಯಲ್ಲಿದ್ದಾಗಲೇ ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ದಿನಾಂಕಃ 21.11.1996 ಅಥವಾ 1997 ರಲ್ಲಿ ತೀರಿಕೊಂಡಿರುತ್ತಾರೆ.

ನನ್ನ ತಂದೆಯವರಿಗೆ ಆರೋಗ್ಯ ಸಮಸ್ಯೆಗಳು ಇದ್ದ ಕಾರಣ ತೀರಿಕೊಂಡಿದ್ದರು ಎಂದರೆ ಸರಿ. ನಾನು ನನ್ನ ವಕೀಲರಿಗೆ ನನ್ನ ತಂದೆಯವರು ತೀರಿಕೊಂಡ ದಿನಾಂಕ ಮತ್ತು ಯಾವ ಕಾರಣಕ್ಕೆ ತೀರಿಕೊಂಡಿರುತ್ತಾರೆ ಎಂಬ ವಿಷಯವನ್ನು ತಿಳಿಸಿರುತ್ತೇನೆ. ನನ್ನ ತಂದೆಯ ಮರಣ ದಿನಾಂಕದ ಬಗ್ಗೆ ನನ್ನ ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ.

ಸ.ನಂ. 54 ರ ಪೂರ್ತಿ ವಿಸ್ತೀರ್ಣ 4 ಎಕರೆ 20 ಗುಂಟೆ ಇರುತ್ತದೆ . ಸ.ನಂ. 54 ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತು ನಮ್ಮ ಕುಟುಂಬದ ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ಪಹಣಿಗಳನ್ನು ಮತ್ತು ಇತರೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸ.ನಂ. 54 ಮೂಲತಃ ನನ್ನ ತಾತನಿಗೆ ಸೇರಿದ ಆಸ್ತಿಯಾಗಿರುತ್ತದೆ. ನನ್ನ ತಾತನಿಗೆ ಈ ಆಸ್ತಿ ಸೇರಿರುತ್ತದೆ ಎಂದು ತೋರಿಸಲು ನಾನು ಮಾನ್ಯ ನ್ಯಾಯಾಲಯದಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಗೊತ್ತಿಲ್ಲ. ನಾನು ಈ ದಾವೆಯಲ್ಲಿ ದಾವಾ ಸ್ವತ್ತಿಗೆ ಸಂಬಂದಪಟ್ಟಂತೆ ಕೇವಲ ನಿ ಪಿ 2 ಆರ್ ಟಿ ಸಿ ಯನ್ನು ಮಾತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ ಎಂದರೆ ಸರಿ. ಈ ಆಸ್ತಿ ನನ್ನ ತಂದೆಗೆ ಬಂದಿರುತ್ತದೆ ಎಂದು ನಾನು ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿ ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿಯ ಹೆಸರಿಗೆ ಸದರಿ ಆಸ್ತಿಯ ಖಾತೆ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ.

ಗಂಗರಾಜಯ್ಯ ಅಂದರೆ ನನ್ನ ತಂದೆಯ ತಮ್ಮ ಮತ್ತು ನನ್ನ ತಾಯಿಯ ನಡುವೆ ವಿಭಾಗದ ಯಾವುದೇ ಪತ್ರ ಆಗಿರುವುದಿಲ್ಲ. ಯಾವ ಆಧಾರದ ಮೇಲೆ ಪಹಣಿಗಳಲ್ಲಿ ನನ್ನ ತಾಯಿಯ ಹೆಸರು ತೋರಿಸಲಾಗಿರುತ್ತದೆ ಎಂದರೆ ಸಾಕ್ಷಿ ಅದು ಬಾಯಿಮಾತಿನ ಮೇರೆಗೆ ಖಾತೆ ಬದಲಾವಣೆಯಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಬಾಯಿಮಾತಿನ ಮೇರೆಗೆ ಎಂದು ಹೇಳಿರುವ ವಿಚಾರ ಯಾವ ವರ್ಷ ಆಗಿರುತ್ತದೆ ಎಂದರೆ ಗೊತ್ತಿಲ್ಲ.

ನಿ ಪಿ 2 ಪಹಣಿಯಲ್ಲಿ ಎಂ ಆರ್ ಹೆಚ್ 5/2014-15 ಎನ್ನುವ ಒಂದು ಎಂ ಆರ್ ಇದ್ದು, ಅದನ್ನು ನಾನು ನೋಡಿರುವುದಿಲ್ಲ. 2014-15 ಕ್ಕಿಂತ ಹಿಂದೆ ದಾವಾ ಆಸ್ತಿಯನ್ನು ನನ್ನ ಚಿಕ್ಕಪ್ಪ ಗಂಗರಾಜಯ್ಯ ನವರು ಅದರಲ್ಲಿ ಉಳುಮೆ ಮಾಡಿ ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ಗಂಗರಾಜಯ್ಯ ನವರು ಅದರಲ್ಲಿ ಉತ್ಪತ್ತಿ ಬರುವುದನ್ನು ಪಡೆಯುತ್ತಿದ್ದರು ಎಂದರೆ ಸರಿ.

ದಾವಾ ಸ್ವತ್ತು ಪಿತ್ರಾರ್ಜಿತ ಸ್ವತ್ತು ಎಂದು ತೋರಿಸಲು ನನ್ನ ಹತ್ತಿರ ಯಾವುದೇ ದಾಖಲಾತಿಗಳು ಇರುವುದಿಲ್ಲ. ದಾಖಲಾತಿಗಳನ್ನು ಪರಿಶೀಲನೆ ಮಾಡಿ, ನ್ಯಾಯಾಲಯಕ್ಕೆ ಹಾಜರು ಮಾಡಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಮಾಡಲು ನಾನು ಯಾವುದೇ ಎನ್ ಓ ಸಿ ಯನ್ನು ನೀಡಿರುವುದಿಲ್ಲ. ಸ.ನಂ. 54 ನ್ನು ನಾನು ಖುದ್ದಾಗಿ ಪರಿಶೀಲನೆ ಮಾಡಿರುತ್ತೇನೆ. ಯಾವ ದಿನವೂ ನಾನು ಅತ್ತಿಂಗೆರೆಯಲ್ಲಿ ವಾಸವಿರಲಿಲ್ಲ ಎಂದರೆ ಸರಿ.

ನನ್ನ ವಾದಪತ್ರದಲ್ಲಿ ಹೇಳಿರುವ ಹಾಗೆ ರೂ 2,50,000/- ಆದಾಯ ಹೇಗೆ ಬರುತ್ತದೆ ಎಂದು ಕೇಳಿದರೆ ನಾವು ಮಾವಿನ ಗಿಡಗಳನ್ನು ಹಾಕಿರುತ್ತೇವೆ, ಅದರಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಅಲ್ಲಿ ಎಷ್ಟು ಮಾವಿನ ಗಿಡಗಳಿವೆ ಎಂದು ನನಗೆ ಲೆಕ್ಕ ಗೊತ್ತಿಲ್ಲ. ಈಗ ಸದರಿ ರೂ.2,50,000/- ಗಳನ್ನು ಗಂಗರಾಜಯ್ಯ ನವರು ಪಡೆದುಕೊಳ್ಳುತ್ತಿದ್ದಾರೆ. ರೂ. 2,50,000/- ಆದಾಯ ಬರುತ್ತಿರುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವ ದಾಖಲಾತಿ ನೀಡಿರುವುದಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**